ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್ಎಸ್ಎಸ್/ಚಟುವಟಿಕೆ/02/2019-20

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 29.07.2019

## ಸುತ್ತೋಲೆ

ವಿಷಯ: ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣಮಹೋತ್ಸವದ ಸ್ಮರಣ ಸಂಚಿಕೆಗೆ **ಲೇಖನಗಳನ್ನು** ಹಾಗೂ **ಘಟಕಗಳ ವಿವರಗಳನ್ನು ಕಳುಹಿಸುವ** ಬಗ್ಗೆ.

ಉಲ್ಲೇಖ : ರಾಜ್ಯ ಎನ್.ಎಸ್.ಎಸ್.ಅಧಿಕಾರಿಯವರ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/37/2018-19/203 ದಿನಾಂಕ: 29.07.19

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2019ರ ಸೆಪ್ಟೆಂಬರ್ 24 ರಂದು ರಾಷ್ಟ್ರೀಯ ಸೇವಾ ಯೋಜನೆಯು ಸ್ಥಾಪನೆಗೊಂಡು 50 ವರ್ಷ ಪೂರ್ಣಗೊಳ್ಳುವುದರ ಸವಿ ನೆನಪಿಗಾಗಿ ರಾಜ್ಯ ಎನ್.ಎಸ್.ಎಸ್ ಕೋಶವು ಸ್ಮರಣ ಸಂಚಿಕೆಯೊಂದನ್ನು ಹೊರತರಲು ನಿರ್ಧರಿಸಿದೆ. ಈ ಸ್ಮರಣ ಸಂಚಿಕೆಗೆ ಈಗಿನ ಮತ್ತು ಹಿಂದಿನ ಸಂಯೋಜನಾಧಿಕಾರಿಗಳು, ಯೋಜನಾಧಿಕಾರಿಗಳು, ಸ್ವಯಂಸೇವಕರು, ಸ್ವಯಂಸೇವಕಿಯರಿಂದ ಲೇಖನಗಳನ್ನು ಆಹ್ವಾನಿಸಲಾಗಿದೆ.

**ಯಶಸ್ವಿ ಕಥೆಗಳು** (Success Stories): ಕಳೆದ ಐವತ್ತು ವರ್ಷಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ ಜಾರಿಗೆ ತಂದ ಹಲವು ಯೋಜನೆಗಳು ಉದಾ: ಶೌಚಾಲಯಗಳ ನಿರ್ಮಾಣ, ಕಾಲೇಜು ಕಾಂಪೌಂಡ್-ಕ್ರೀಡಾಂಗಣ ನಿರ್ಮಾಣ, ಕೆರೆ ಹೂಳೆತ್ತುವಿಕೆ-ಪುನರ್ ನಿರ್ಮಾಣ, ನಿರಂತರ ಅರಿವು ಕಾರ್ಯಕ್ರಮ, ನಿರಂತರ ತರಬೇತಿ ಕಾರ್ಯಕ್ರಮ, ವಿದ್ಯಾರ್ಥಿ ವೃಂದದಿಂದ ಸಮಾಜಮುಖಿ ಯೋಜನೆಗಳ ಅನುಷ್ಠಾನ ಇದೇ ರೀತಿಯ ಇನ್ನೂ ಹಲವು ಯಶಸ್ವಿಯಾಗಿ ಪೂರೈಸಿರುವ ಯೋಜನೆಗಳೆಲ್ಲವೂ ಯಶಸ್ಸಿನ ಕಥೆಗಳಾಗುತ್ತವೆ. ಒಂದು ಸಂಸ್ಥೆಯಿಂದ ಎಷ್ಟು ಬೇಕಾದರೂ ಇಂತಹ ಯಶಸ್ವಿ ಕಥೆಗಳನ್ನು ಒಂದು ಪುಟ ಮೀರದಂತೆ ಯೋಜನೆಯ ಹಿನ್ನಲೆ, ಅನುಷ್ಠಾನ, ಯಶಸ್ಸು, ಫಲಾನುಭವಿಗಳ ವಿವರ ಇತ್ಯಾದಿಗಳ ಬಗ್ಗೆ ಬರೆದು ಕಳುಹಿಸುವುದು.

**ಅನುಭವ ಕಥನ:** ಕಳೆದ ಐವತ್ತು ವರ್ಷಗಳಲ್ಲಿ ಹಲವಾರು ಸ್ವಯಂಸೇವಕರು ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಕಾರ್ಯ ನಿರ್ವಹಿಸಿ ಇಂದು ಸಮಾಜದ ಮುಖ್ಯ ವಾಹಿನಿಯಲ್ಲಿ ಗುರುತಿಸಿಕೊಂಡಿದ್ದಾರೆ. ಅಂತಹ ಗಣ್ಯರ ಅಭಿಪ್ರಾಯ/ಸಂದರ್ಶನಗಳನ್ನು ಸ್ವಯಂ ಸೇವಕರ ಮೂಲಕ ಸಂಗ್ರಹಿಸಿ ಒಂದು ಪುಟ ಮೀರ ದಂತೆ ಕಳುಹಿಸಿದಲ್ಲಿ ಅದನ್ನು ಪ್ರಕಟಿಸಲಾಗುವುದು ಇದರಿಂದ ರಾಷ್ಟ್ರೀಯ ಸೇವಾ ಯೋಜನೆಯು ಅವರ ವ್ಯಕ್ತಿತ್ವದ ಮೇಲೆ ಬೀರಿದ ಪರಿಣಾಮವನ್ನು ಗುರುತಿಸಲು ಸಾಧ್ಯವಾಗುತ್ತದೆ. ಇವುಗಳನ್ನು ಅರ್ಥಪೂರ್ಣ ದಾಖಲಾತಿಯಾಗಿಸಿ ರಾಜ್ಯ ಎನ್.ಎಸ್.ಎಸ್ ಕೋಶವು ಪ ಪ್ರಕಟಿಸಲಿದೆ. ಕಾರಣ ತಾಂತ್ರಿಕ ಶಿಕ್ಷಣ ಇಲಾಖೆ ಅಡಿಯಲ್ಲಿರುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳು ತಮ್ಮ ಸಂಸ್ಥೆಗಳಿಂದ ಗರಿಷ್ಠ ಲೇಖನಗಳು ಬರುವಂತೆ ಕ್ರಮ ಕೈಗೊಂಡು ಇಲಾಖೆಯ ರಾ.ಸೇ.ಯೋ ಕಛೇರಿಯ ಮಿಂಚಂಚೆ nssdte@gmail.comಕ್ಕೆ ದಿನಾಂಕ: 10-09-2019 ರೊಳಗೆ ಕಳುಹಿಸಲು ಸೂಚಿಸಲಾಗಿದೆ.

ಹಾಗೆಯೇ **ಘಟಕಗಳ ವಿವರಗಳನ್ನೂ** ಸಹ 10.09.2019 https://forms.gle/GuRFPwrj7arbRCp69 ಮೂಲಕ ಭರ್ತಿಮಾಡಿ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು,

**ಇವರಿಗೆ,** ರಾಜ್ಯದ ಎಲ್ಲಾ ಸರ್ಕಾರಿ /ಅನುದಾನಿತ/ಖಾಸಗಿ, ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ -ಸೂಕ್ತ ಕ್ರಮಕ್ಕಾಗಿ

**ಪ್ರತಿ:** 1) ರಾಜ್ಯ ಎನ್ ಎಸ್ ಎಸ್ ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು ರಾಷ್ಟ್ರೀಯ ಸೇವಾ ಯೋಜನೆ ಕೋಶ,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ. ಬೆಂಗಳೂರು-01
2) ಇ-ಆಡಳಿತ ವಿಭಾಗಕ್ಕೆ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
3) ಕಛೇರಿ ಪ್ರತಿ.